ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

'MUNJAVU' Kannada Weekly, KOPPA-CHM. ಫೋನ್ : 114

8ನೇ ವರ್ಷ 45ನೇ ಸಂಚಿಕೆ ಕೊಪ್ಪ 8-7-1990 ಭಾನುವಾರ ಬೆಲೆ 60 ಪೈಸೆ

ಹಾವು, ಹುಚ್ಚು ನಾಯಿ ಕಡಿತಕ್ಕೆ ಮದ್ದು ಆಸ್ಪತ್ರೆಗಳಲ್ಲಿ ಸದಾ ದಾಸ್ತಾನಿಗೆ ಮನವಿ

ಕೊಪ್ಪ : ಮಳೆಗಾಲ ಬಂತೆಂದರೆ ಎಲ್ಲೆಲ್ಲೂ ಹುಚ್ಚು ನಾಯಿಗಳ ಹಾಗೂ ನಾಗರ ಹಾವುಗಳ ಕಡಿತದ ಉಪದ್ರವ ವಿಪರೀತವಾಗುತ್ತದೆ. ಆದರೆ ಅದೇ ಸಮಯಕ್ಕೆ ತುರ್ತಾಗಿ ಬೇಕಾಗುವ ಜೀವರಕ್ಷಕ ಔಷಧಿಗಳು ಆಸ್ಪತ್ರೆಗಳಲ್ಲಿ ದಾಸ್ತಾನಿಲ್ಲವಾಗುವುದು ಮಾಮೂಲು.

ಎಲ್ಲ ಕಡೆ ಆಸ್ಪತ್ರೆಗಳಲ್ಲಿ ಈ ಎರಡು ಅಮೂಲ್ಯ ಜೀವ ರಕ್ಷಕ ಔಷಧಿಗಳಿಗೆ ಯಾವ ಕಾಲದಲ್ಲೂ ಕೊರತೆ ಬಾರದಂತೆ ಅಲ್ಲಲ್ಲಿನ ವೈದ್ಯಾಧಿಕಾರಿಗಳು ಮುಂಜಾಗ್ರತೆ ವಹಿಸಬೇಕೆಂದು, ಇತ್ತೀಚೆಗೆ ಇಂಥ ಕಠಿಣ ಪರಿಸ್ಥಿತಿಗೆ ಸಿಕ್ಕಿಕೊಂಡಿದ್ದ ನಾಗರಿಕರೊಬ್ಬರು ವಿನಂತಿಸಿದ್ದಾರೆ.

ಈ ಔಷಧಿಗಳನ್ನು ಪೂರೈಸುವ ಊಟಿ, ಮುಂಬೈಯಂಥ ಸ್ಥಳಗಳಲ್ಲೇ ಈ ಔಷಧಗಳ ದಾಸ್ತಾನು ಇಲ್ಲವಾಗುತ್ತಿದ್ದು, ಸರ್ಕಾರ ಕೂಡ ಈ ಸಮಸ್ಯೆಯ ಬಗ್ಗೆ ತುರ್ತು ಗಮನ ನೀಡುವ ಅಗತ್ಯವಿದೆ.

"ಶ್ರೀಮಂತ ಯುವಕರ ಭೋಗಲಾಲಸೆಗೆ ತರುಣಿಯರನ್ನೊದಗಿಸುವ ಜಾಲ" :

ಕೊಪ್ಪದ ಕೊಳಕ ಕಲಕಿರುವ 'ಜನಮಿತ್ರ' ವರದಿ

ಕೊಪ್ಪ : ಚಿಕ್ಕಮಗಳೂರಿನ ದಿನಪತ್ರಿಕೆ 'ಜನಮಿತ್ರ'ದ 6 7.90ರ ಸಂಚಿಕೆಯಲ್ಲಿ ಪ್ರಕಟವಾಗಿರುವ "ಕೊಪ್ಪದಲ್ಲಿ ಹೆಣ್ಣು ಮಕ್ಕಳ ಮಾರಾಟ ಜಾಲ !" ಎಂಬ ವರದಿ ಕೊಪ್ಪ ಮತ್ತು ಸುತ್ತಮುತ್ತ ವಿಚಿತ್ರ ಗುಲ್ಲೆಬ್ಬಿಸಿದೆ.

ಎಲ್ಲೆಡೆ ಸದರಿ ಪತ್ರಿಕೆಯ ಪ್ರತಿಗಾಗಿ ಕುತೂಹಲಿಗಳು ಹುಡುಕಾಡುತ್ತಿದ್ದರೆ, ಆ ವಿಚಾರಕ್ಕೆ ಸಂಬಂಧಪಟ್ಟವರೆನ್ನಲಾದ 'ಕಾಣದ ಕೈ'ಗಳು ಸಾಧ್ಯವಾದ ಎಲ್ಲ ಕಡೆ ಪತ್ರಿಕೆಯನ್ನು ಮುಚ್ಚಿ ಹಾಕಿವೆ ಎನ್ನಲಾಗುತ್ತಿದೆ. ಅಲ್ಲಿ-ಇಲ್ಲಿ ಸಿಕ್ಕ ಒಂದೊಂದು ಪ್ರತಿಯನ್ನೇ ಜನ ಜೆರಾಕ್ಸ್ ಮಾಡಿಸಿ ಹಂಚಿಕೊಂಡು ಓದುತ್ತಿರುವ ಅಪರೂಪದ ವಿದ್ಯಮಾನ ನಡೆಯುತ್ತಿದೆ.

ಕೊಪ್ಪದ (ರಾಷ್ಟ್ರೀಕೃತ) ಸಂಸ್ಥೆಯೊಂದರ ಏಜೆಂಟ್ ಒಬ್ಬ, ಹರಿಹರಪುರದ ಬಳಿಯ ಕೆಲ ಯುವಕರು ಮುಂತಾದವರ ತಂಡ, ಸುತ್ತಮುತ್ತಲಿಂದ ಮುಗ್ಧ ತರುಣಿಯರನ್ನು ಕರೆತಂದು ಶ್ರೀಮಂತ ಯುವಕರ ಭೋಗ ಲಾಲಸೆಗೆ ಒದಗಿಸುತ್ತಿದ್ದಾರೆಂದು ಪತ್ರಿಕೆ ಬರೆದಿದೆ.

ಈ ವಿಚಾರ ಇಡೀ ಊರಿಗೆಲ್ಲ ಗೊತ್ತಿದ್ದು ಪೋಲೀಸ್ ಇಲಾಖೆಗೂ ಗೊತ್ತಿರುವುದಲ್ಲದೆ, ಈಚೆಗೆ ಒಬ್ಬ ಯುವತಿಯನ್ನು ಈ ತಂಡ ಗೋವಾಕ್ಕೆ ಸಾಗಿಸಿದ್ದು ಕೂಡ ಪುರಾರಾಗಿ ಅವರ ಗಮನಕ್ಕೆ ಬಂದರೂ ಅದನ್ನು ಅಲ್ಲಲ್ಲೇ 'ಹಶಪ್' ಮಾಡಿ, ಒಟ್ಟಾರೆ ನಿಷ್ಕ್ರಿಯರಾಗಿದ್ದಾರೆಂದು ಪತ್ರಿಕೆ ಆರೋಪಿಸಿದೆ.

ಈ ವರದಿಯಲ್ಲಿ ಸಂಬಂಧಪಟ್ಟವರ ಹೆಸರು, ಇನ್ನಿತರ ಯಾವ ವಿವರಗಳೂ ಇಲ್ಲದಿದ್ದರೂ, ಇಡೀ ಊರಲ್ಲಿ ಜನ ಆ ಯುವಕರ ಹೆಸರು ಹೇಳಿಕೊಂಡು ಮಾತಾಡಿಕೊಳ್ಳುತ್ತಿದ್ದಾರೆ

ಈ ಬಗ್ಗೆ ಸರ್ಕಲ್ ಇನ್ಸ್‌ಪೆಕ್ಟರ್ ಪಾಶ ಅವರನ್ನು ಜು. 7ರಂದು ವಿಚಾರಿಸಿದಾಗ, ಅವರಿಗೆ 'ಜನಮಿತ್ರ'ದ ಪ್ರತಿಯನ್ನು ಸಹ ಒದಗಿಸಬೇಕಾಯಿತು. ತಾನಿನ್ನೂ ಇಲ್ಲಿಗೆ ಹೊಸಬನಿದ್ದು, ಈ ವಿಚಾರ ತನಗೇನೂ ತಿಳಿಯದೆಂದೂ, ಸಾರ್ವಜನಿಕರು ಸಹಕರಿಸಿದರೆ ಇಂಥ ಅನೈತಿಕ, ಅಕ್ರಮ ವ್ಯವಹಾರಗಳನ್ನು ನಿಯಂತ್ರಿಸುವುದಾಗಿಯೂ ತಿಳಿಸಿದರು

1988 ಮತ್ತು 89ರ 2 ವರ್ಷಗಳಲ್ಲಿ ಜಿಲ್ಲೆಯ 4 ತಾ॥ಗಳಲ್ಲಿ 50 ಯುವತಿಯರು ನಾಪತ್ತೆಯಾದ ದೂರು ಬಂದಿದ್ದು, ಅದರಲ್ಲಿ 44 ಜನ ಪತ್ತೆಯಾಗಿದ್ದಾರೆಂದು ಎಸ್ಪಿ ಚಿಕ್ಕೆರೂರ್ ತಿಳಿಸಿದ್ದಾರೆ. ಈ ಪೈಕಿ ಕೊಪ್ಪ ತಾ॥ನಿಂದ 17 ಜನ ನಾಪತ್ತೆಯಾಗಿ 15 ಮಂದಿ ಪತ್ತೆಯಾಗಿದ್ದಾರೆಂದಿದ್ದಾರೆ.

'ಕಪ್ಪು ಹಲಗೆ' ಯೋಜನೆ : ಕೊಪ್ಪತಾಲ್ಲೂಕಿಗೆ 61 ಮಂದಿ ಶಿಕ್ಷಕರ ನೇಮಕಕ್ಕೆ ಆದೇಶ

ಕೊಪ್ಪ: 'ಕಪ್ಪು ಹಲಗೆ' ಯೋಜನೆಯಲ್ಲಿ ಈ ತಾಲ್ಲೂಕಿಗೆ 61 ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳುವಂತೆ ಸರ್ಕಾರ ಜಿಲ್ಲಾ ಪರಿಷತ್ತಿಗೆ ಆದೇಶ ನೀಡಿದೆ.

ಆದರೆ ಕೇಂದ್ರ ಸರ್ಕಾರದಿಂದ ಈ ಯೋಜನೆಯ ಹಣ ಮಂಜೂರಾದ ನಂತರ ನೇಮಕ ಮಾಡಲು ತಿಳಿಸಲಾಗಿದೆಯಲ್ಲದೆ, ನೇಮಕ ಯಾವ ರೀತಿ ಎಂಬ ಬಗ್ಗೆ ಇನ್ನೂ ಆದೇಶ ಬರಬೇಕಾಗಿದೆ ಎಂದು ಜಿ.ಪ. ಅಧ್ಯಕ್ಷ ಬಿ.ಎಲ್.ರಾಮದಾಸ್ ತಿಳಿಸಿದ್ದಾರೆ

ಕೃಷಿ ಪತ್ರಿಕೋದ್ಯಮ ಶಿಬಿರ: ಜು. 14ರಂದು ಸಿದ್ಧತಾ ಸಭೆ

ಕೊಪ್ಪ : 'ಮ್ಯಾಮ್ಕೋಸ್'. ಚಿಕ್ಕಮಗಳೂರು ಜಿಲ್ಲಾ ಅಡಿಕೆ ಬೆಳೆಗಾರರ ಸಂಘ ಮತ್ತು ಅಡಿಕೆ ಪತ್ರಿಕೆ ಜಂಟಿಯಾಗಿ ಇಲ್ಲಿ ಆಗಸ್ಟ್ ತಿಂಗಳಲ್ಲಿ ಏರ್ಪಡಿಸಲು ಉದ್ದೇಶಿಸಿರುವ ಕೃಷಿ ಪತ್ರಿಕೋದ್ಯಮ ತರಬೇತಿ ಶಿಬಿರದ ಸಿದ್ಧತಾ ಸಭೆ ಇಲ್ಲಿ ಜು. 14ರ ಶನಿವಾರ ಮಧ್ಯಾಹ್ನ 3 ಗಂಟೆಗೆ ಭೂ ಅಭಿವೃದ್ಧಿ ಬ್ಯಾಂಕ್ ಸಭಾಂಗಣದಲ್ಲಿ ನಡೆಯಲಿದೆ.

ಅಡಿಕೆ ಪತ್ರಿಕೆ ಸಂಪಾದಕರಾದ 'ಶ್ರೀ' ಪಡ್ರೆ ಈ ಸಭೆಯಲ್ಲಿ ಭಾಗವಹಿಸುವರು. ಆಸಕ್ತರು ಈ ಸಭೆಯಲ್ಲಿ ಭಾಗವಹಿಸುವಂತೆ ವ್ಯವಸ್ಥಾಪಕರು ಮನವಿ ಮಾಡಿದ್ದಾರೆ.

ಆಕಾಶವಾಣಿ ಕಲಾವಿದರಾಗಿ ಡಾ॥ ಜಗದೀಶ್ ಆಯ್ಕೆ

ಕೊಪ್ಪ : ಇಲ್ಲಿನ ಪಶು ವೈದ್ಯ ಶಾಲೆಯಲ್ಲಿ ಪಶುವೈದ್ಯರಾಗಿರುವ ಡಾ॥ ಎಚ್. ಆರ್. ಜಗದೀಶ್ ಭದ್ರಾವತಿ ಆಕಾಶವಾಣಿ ಕಲಾವಿದರಾಗಿ (ಲಘು ಸಂಗೀತ) ಆಯ್ಕೆಯಾಗಿದ್ದಾರೆ.

ಜುಲೈ 10ರ ಮಂಗಳವಾರ ಬೆಳಗ್ಗೆ 7.20ಕ್ಕೆ ಇವರ ಚೊಚ್ಚಲ ಕಾರ್ಯಕ್ರಮ ಭದ್ರಾವತಿ ನಿಲಯದಿಂದ ಪ್ರಸಾರವಾಗಲಿದೆ

ಅಣಬೆ, ಕರಿಮೆಣಸು ಬೇಸಾಯ ತರಬೇತಿ

ಮೂಡಿಗೆರೆಯ ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿ ಜುಲೈ 9 ನೇ ಸೋಮವಾರ ಬೆಳಗ್ಗೆ 10 ಗಂಟೆಗೆ **ಅಣಬೆ ಬೇಸಾಯ ಪದ್ಧತಿ** ಬಗ್ಗೆ ಹಾಗೂ ಜುಲೈ 11ನೇ ಬುಧವಾರ ಬೆಳಗ್ಗೆ 10 ಗಂಟೆಗೆ **ಕರಿಮೆಣಸು ಬೇಸಾಯ ಪದ್ಧತಿ** ಬಗ್ಗೆ ತರಬೇತಿ ಕಾರ್ಯಕ್ರಮವಿದೆ.

ಅಲ್ಲದೆ, **ಭತ್ತದ ಸಸಿ ನಾಟಿ ಮತ್ತು ಇತರೆ ಬೇಸಾಯ ಪದ್ಧತಿಗಳನ್ನು** ಕುರಿತ ತರಬೇತಿ ಕಾರ್ಯಕ್ರಮಗಳು ಕೊಪ್ಪ ತಾಲ್ಲೂಕಿನಲ್ಲಿ ಜು 17-ಹಾಲ್ಮುತ್ತೂರು, 18-ಹಿರೇಗದ್ದೆ, 19- ಲೋಕನಾಥಪುರ, 20-ಕಲ್ಲುಗುಡ್ಡೆ ಮತ್ತು 21 ಶನಿವಾರ ಲೆಮಡ್ಲು-ಈ ಸ್ಥಳಗಳಲ್ಲಿ ಪ್ರತಿ ದಿನ ಬೆಳಗ್ಗೆ 10-30 ಗಂಟೆಯಿಂದ ನಡೆಯಲಿವೆ.

ಬಸವಪುರ, ಕಡವಂತಿಗೆ ಬಸ್ ಓಡಿಸಲು ಮನವಿ

ಬಾಳೆಹೊನ್ನೂರು : ಇಲ್ಲಿಗೆ ಸಮೀಪದ ಬಸವಪುರ ಮತ್ತು ಕಡುವಂತಿ ಗ್ರಾಮಗಳಿಗೆ ಮಳೆಗಾಲದಲ್ಲಿ ಮಧ್ಯಾಹ್ನದ ಬಸ್ಸನ್ನು ಸರಿಯಾಗಿ ಓಡಿಸದೆ, ಗ್ರಾಮದ ಜನರಿಗೆ ತೀವ್ರ ತೊಂದರೆಯಾಗಿದ್ದು, ಶಂಕರ್ ಏಜೆನ್ಸಿಯವರು ಕೂಡಲೇ ಸದರಿ ಬಸ್ಸನ್ನು ಮಳೆಗಾಲದಲ್ಲೂ ಸಹ ಮಧ್ಯಾಹ್ನದ ಟ್ರಿಪ್ ಓಡಿಸಬೇಕೆಂದು ಗ್ರಾಮಸ್ಥರ ಪರವಾಗಿ ಬಾಳೆಹೊನ್ನೂರಿನ ಸಯ್ಯದ್ ಹುಸೇನ್ ಆಗ್ರಹಿಸಿದ್ದಾರೆ.

ಭೀಕರ ಟಿಲ್ಲರ್ ಅಪಘಾತ : ತಂದೆ - ಮಗನ ದುರ್ಮರಣ

ದಯಂಬಳ್ಳಿ : ಇಲ್ಲಿಗೆ ಸಮೀಪ ಆಗಳಗಂಡಿ-ಬಿ. ಜಿ. ಕಟ್ಟೆ ರಸ್ತೆಯಲ್ಲಿ ಕಳೆದ ಶುಕ್ರವಾರ (29 6 90) ನಡೆದ ಭೀಕರ ಟಿಲ್ಲರ್ ಅಪಘಾತದಲ್ಲಿ ತಂದೆ ಮತ್ತು ಮಗ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಮೀಪದ ಕದರವಳ್ಳಿಯ ವೆಂಕಟೇನಾಯ್ಕರು ಮತ್ತು ಅವರ 3ನೇ ಮಗ ರಾಜಶೇಖರ ಇವರೇ ಈ ದುರ್ದೈವಿಗಳಾಗಿದ್ದು, ಕಡಿದಾದ ನೀರ್ಕಟ್ಟು ಇಳಿಜಾರಿನಲ್ಲಿ ಈ ದುರಂತ ನಡೆದಿದೆ ಟಿಲ್ಲರ್‌ಗೆ ಮೊದಲೇ ಬ್ರೇಕ್ ಸರಿಯಿಲ್ಲದಿದ್ದು, ಇಳಿಜಾರಿನಲ್ಲಿ ಬಹುಶಃ ನ್ಯೂಟ್ರಲ್‌ನಲ್ಲಿ ನಡೆಸ ಹೋಗಿ, ಹತೋಟಿ ತಪ್ಪಿದ ಟಿಲ್ಲರ್ ಮರಕ್ಕೆ ಡಿಕ್ಕಿ ಹೊಡೆಯಿತು. ವೆಂಕಟೇನಾಯ್ಕರು ಹಿಂಬದಿಯ ಟ್ರೈಲರ್‌ನಿಂದ ರಸ್ತೆಗೆಸೆಯಲ್ಪಟ್ಟರೆ, ಡ್ರೈವ್ ಮಾಡಿದ ರಾಜಶೇಖರ ಇಂಜಿನ್ನು ಮರಕ್ಕೆ ಡಿಕ್ಕಿ ಹೊಡೆಯದಂತೆ ತಪ್ಪಿಸುವಲ್ಲಿ ಯಶಸ್ವಿಯಾದರೂ, ಹ್ಯಾಂಡಲ್ ಮತ್ತು ಟ್ರೈಲರ್ ಮಧ್ಯೆ ಸಿಕ್ಕಿ ಅಪ್ಪಚ್ಚಿಯಾದನು. ಇಬ್ಬರೂ ಸ್ಥಳದಲ್ಲೇ ಅಸು ನೀಗಿದರು.

ರಾಜಶೇಖರನ ದೇಹ ಛಿದ್ರ ಛಿದ್ರವಾಗಿ, ಹೊಟ್ಟೆಯೊಳಗಿನ ಅಂಗಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಎಸೆಯಲ್ಪಟ್ಟಿದ್ದಲ್ಲದೆ, ಒಂದು ಕೈ ತುಂಡಾಗಿ ಪತ್ತೆಯೇ ಆಗಲಿಲ್ಲವೆನ್ನಲಾಗಿದೆ.

ಟಿಲ್ಲರ್‌ನಲ್ಲಿ ಅಪಘಾತಗಳು ಅಪರೂಪವಲ್ಲವಾದರೂ, ಪ್ರಾಣ ಹಾನಿಯಾಗಿರುವುದು ಈ ಪ್ರಾಂತ್ಯಕ್ಕೆ ಇದೇ ಮೊದಲೆನ್ನಲಾಗಿದೆ.

ವೆಂಕಟೇನಾಯ್ಕ ನೆಮ್ಮದಿಯ ತುಂಬು ಸಂಸಾರಿಯಾಗಿದ್ದು, ಅವರ ಹಿರಿ ಮಗನೇ ಸಾಮಾನ್ಯವಾಗಿ ಟಿಲ್ಲರ್ ಓಡಿಸುತ್ತಿದ್ದುದು ಎನ್ನಲಾಗಿದೆ. ಅಂದು ಶೃಂಗೇರಿಯಿಂದ ಅಕ್ಕಿ ಮಾಡಿಸಿಕೊಂಡು, ಕೊಳೆ ಔಷಧಿ ಸಾಮಾನು ತರಬೇಕಿದ್ದು; "ಟಿಲ್ಲರ್ ಸರಿಯಿಲ್ಲ, ಇಂದು ಬೇಡ" ಎಂದು ಹೇಳಿ ಅವರು ತಮ್ಮ ನೆಂಟರ ಮನೆಗೆ ಹೋದರೆಂದೂ, ಹೊಳುವಾಗಿದ್ದ ಕಾರಣ ನಾಯ್ಕರು 3ನೇ ಮಗನನ್ನೇ ಹೊರಡಿಸಿದರೆಂದೂ ತಿಳಿದು ಬಂದಿದೆ.

ಹೋಗುವಾಗಲೇ, ದಾರಿಯಲ್ಲಿ ಒಮ್ಮೆ ಟಿಲ್ಲರ್ ಸ್ವಲ್ಪ ತೊಂದರೆ ಕೊಟ್ಟರೂ ಏನೋ 'ರಿಪೇರಿ' ಮಾಡಿಕೊಂಡು ಹೋಗಿ, ಎಲ್ಲಾ ಕೆಲಸ ಮುಗಿಸಿಕೊಂಡು, ಇನ್ನೇನು ಮನೆಯ ಹತ್ತಿರ ಹತ್ತಿರ ಬರುವಷ್ಟರಲ್ಲಿ ನಡೆದ ಈ ಘೋರ ದುರಂತ, ಇಡೀ ಈ ಪ್ರದೇಶದಲ್ಲೆಲ್ಲ ದಿಗ್ ಭ್ರಮೆ ಹುಟ್ಟಿಸಿದೆ. ಗ್ರಾಮದಾದ್ಯಂತ ಶೋಕ ಆವರಿಸಿದೆ.

ಕೃಷ್ಣ ಎಂಬ ಕೆಲಸಗಾರನೂ ಟಿಲ್ಲರಿನಲ್ಲಿ ಬಂದಿದ್ದು, ಟಿಲ್ಲರ್ ಇಳಿಜಾರಿನಲ್ಲಿ ಹತೋಟಿ ತಪ್ಪಿದೊಡನೆಯೇ ರಸ್ತೆಗೆ ಹಾರಿ ಬಚಾವಾದನು. ಅಲ್ಪಸ್ವಲ್ಪ ಪೆಟ್ಟು ತಗುಲಿ, ಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಪಶ್ಚಿಮ ಘಟ್ಟ ಪರಿಸರದ ಒಂದು ವ್ಯಾಪಕ ಸಮೀಕ್ಷೆ

ರಾಜ್ಯದಲ್ಲಿ ಪಶ್ಚಿಮ ಘಟ್ಟಗಳಿಗೆ ಹೊಂದಿಕೊಂಡಿರುವ 9 ಜಿಲ್ಲೆಗಳ 40 ತಾಲ್ಲೂಕುಗಳಲ್ಲಿ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಿಂದ ಆದ ಪರಿಣಾಮಗಳು ಮತ್ತು ಆಗಬೇಕಿರುವ ಕಾರ್ಯಗಳು ಹಾಗೂ ಸದ್ಯದ ಪರಿಸರದ ಪರಿಸ್ಥಿತಿ ಬಗ್ಗೆ ಜೂನ್ 1 ರಿಂದ 15 ರವರೆಗೆ ವ್ಯಾಪಕ ಸಮೀಕ್ಷೆ ನಡೆಯಿತು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಭಾರತೀಯ ಪರಿಸರ ವಿಜ್ಞಾನ ಕೇಂದ್ರಗಳು ಜಂಟಿಯಾಗಿ ಇದರ ಹೊಣೆ ಹೊತ್ತಿದ್ದು, ಪ್ರತಿ ತಾಲ್ಲೂಕಿನ ಒಂದು ಮಂಡಲದ ಎರಡು ಗ್ರಾಮಗಳಲ್ಲಿ ಈ ಸರ್ವೇಕ್ಷಣೆ ನಡೆಯಿತು.

ಸಮೀಕ್ಷೆ ನಡೆಯಬೇಕಾಗಿದ್ದ ಒಟ್ಟು ವಿಷಯಗಳೆಂದರೆ : ಕಳೆದ 5 ವರ್ಷಗಳಲ್ಲಿ ಗ್ರಾಮದ ಅಭಿವೃದ್ಧಿಗಾಗಿ ನಡೆದ ಕಾರ್ಯಕ್ರಮಗಳು ಮತ್ತು ಅವುಗಳ ಸಫಲತೆ, ಸಾಮೂಹಿಕ ಭೂಮಿಯ ಹೊಣೆಗಾರಿಕೆ ಬಗ್ಗೆ, ಕಾಡಿನ ರಕ್ಷಣೆ ಹಾಗೂ ಅತಿಕ್ರಮಣ ತಡೆಯುವ ಬಗ್ಗೆ ಜೊತೆಗೆ ಅರಣ್ಯದ ಉತ್ಪನ್ನ ಯಾರಿಗೆ ಸೇರಬೇಕೆಂಬ ಬಗ್ಗೆ ಗ್ರಾಮೀಣ ಜನರ ಅಭಿಪ್ರಾಯ ಸಂಗ್ರಹ, ಗ್ರಾಮದ ಬಂಜರು ಭೂಮಿ ಸ್ಥಿತಿಗತಿಯ ಸಮೀಕ್ಷೆ, ಜೊತೆಗೆ ಇಳಿಜಾರು ಪ್ರದೇಶದಲ್ಲಿ ಭೂ ಸವಕಳಿ ತಡೆಯಲು ಕೈಗೊಂಡ ಕ್ರಮಗಳು, ಕಾಯ್ದಿಟ್ಟ ಮತ್ತು ಸಾಮೂಹಿಕ ಹಾಗೂ ಸಾಮಾಜಿಕ ಅರಣ್ಯಗಳತ್ತ ಕಾರ್ಯರೂಪಕ್ಕೆ ಬಂದ ಯೋಜನೆಗಳು—ಈ ಬಗ್ಗೆ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಣೆಯ ಮೂಲಕವೇ ಸಮೀಕ್ಷೆ ನಡೆಯಿತು.

ಈ ಅಧ್ಯಯನಕ್ಕಾಗಿ ಅದೇ ಪರಿಸರಕ್ಕೆ ಒಳಪಡುವ ಕಾಲೇಜು ತಂಡಗಳನ್ನು ನೇಮಿಸಿ, ಅದಕ್ಕಾಗಿ 2 ದಿನ ತರಬೇತಿ ಶಿಬಿರಗಳನ್ನು ಶಿರಸಿ ಮತ್ತು ಪುತ್ತೂರಿನಲ್ಲಿ ನಡೆಸಿತ್ತು. ಈ ಶಿಬಿರ ಮತ್ತು ಅನಂತರದ ಸಮೀಕ್ಷಾ ಕಾರ್ಯದಲ್ಲಿ ಶೃಂಗೇರಿ ಜೆ. ಸಿ. ಬಿ ಎಂ. ಕಾಲೇಜಿನ ಡಾ॥ ಜಿ. ಕೆ. ಭಟ್ ಮತ್ತು ವೀರಪ್ಪ ಗೌಡ ಇವರುಗಳ ನೇತೃತ್ವದ 10 ವಿದ್ಯಾರ್ಥಿಗಳ 2 ತಂಡಗಳು ಭಾಗವಹಿಸಿ ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕಿನ ಆಯ್ದ ಮಂಡಲಗಳಲ್ಲಿ ಸಮೀಕ್ಷೆ ನಡೆಸಿ, ವರದಿಯನ್ನು ಈಗಾಗಲೇ ಭಾರತೀಯ ವಿಜ್ಞಾನ ಮಂದಿರಕ್ಕೆ ಕಳುಹಿಸಿವೆ.

ಡಾ॥ ಜಿ.ಕೆ. ಭಟ್ ನೇತೃತ್ವದ ನಮ್ಮ ತಂಡವು ಕೊಪ್ಪ ತಾಲ್ಲೂಕಿನ ಅಗಳಗಂಡಿ ಮಂಡಲದ 2 ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿತು. ಹೀಗೆ ಸಮೀಕ್ಷೆ ನಡೆಸುತ್ತಾ ಹೋದಂತೆ ಗ್ರಾಮದ ಒಂದೊಂದೆ ಸಮಸ್ಯೆಗಳು ಬಿಚ್ಚಿಕೊಳ್ಳುತ್ತಾ ಹೋದವು. ಅದಕ್ಕೆ ಪೂರಕವಾಗಿ ಮಂಡಲ ಪಂಚಾಯಿತಿಯ ಕಾರ್ಯವೈಖರಿಯ ಚಿತ್ರಣವು ಮೂಡತೊಡಗಿತು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಹರಿಸಿದ್ದೇನೆ.

ಈ ಎರಡೂ ಗ್ರಾಮದಲ್ಲೂ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಸರಿಯಿಲ್ಲದಿರುವುದಕ್ಕೆ ಮಂಡಲದ ಅಸಮರ್ಪಕ ಆಡಳಿತ ನಿರ್ವಹಣೆಯೇ ಕಾರಣ ಮತ್ತು ಈ ವ್ಯವಸ್ಥೆ ತುರ್ತು ಆಗಬೇಕಾದ ಕೆಲಸವೆಂಬ ಅಭಿಪ್ರಾಯ ಹಲವರದ್ದು.

ಇನ್ನು, ಗ್ರಾಮಾಭಿವೃದ್ಧಿ ಯೋಜನೆಯಡಿಯ ಕಾಮಗಾರಿಗಳ ಪರಿಶೀಲನೆಗಾಗಿ ನಾಲ್ಕೈದು ರಸ್ತೆಗಳಿಗೆ ಭೇಟಿ ನೀಡಿದ್ದೆವು. ನಾವು ನೋಡಿದ ರಸ್ತೆಗಳ ಪಕ್ಕದಲ್ಲಿ ಸಾಮಾನ್ಯವಾಗಿ ಒಂದರಲ್ಲೂ ಸಹ ಸರಿಯಾಗಿ ಕಾಲುವೆ ತೊಡೆಯದೆ, ಜೊತೆಗೆ ಹೊಸ ಮಣ್ಣು ಹಾಕಿರುವುದರಿಂದ ಬರೀ ಕೆಸರಿನಿಂದ ತುಂಬಿತ್ತು. ಈ ಕಾಮಗಾರಿಗಳು ಬಿಲ್ ಪಾವತಿಯಾಗುವವರೆಗೆ ಮಾತ್ರ ಇರಲು ನಿರ್ಮಾಣಗೊಂಡ ತಾತ್ಕಾಲಿಕ ರಸ್ತೆಗಳಂತೆ ಇವೆ.

ಇನ್ನು, ಹರಿಜನ–ಗಿರಿಜನಾಭಿವೃದ್ಧಿ ಯೋಜನೆಗಳೂ ಸಹ ಸರಿಯಾದ ಉಸ್ತುವಾರಿ, ಮಾರ್ಗದರ್ಶನಗಳಿಲ್ಲದೆ, ಫಲಾನುಭವಿಗಳು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಬಹುಶಃ ಅವರಿಗೆ ದೊರೆತ ಎಲ್ಲಾ ತರಹದ ವಸ್ತುಗಳು (ಜೇನು ಪೆಟ್ಟಿಗೆ, ತೆಂಗಿನ ಗಿಡ ಇತ್ಯಾದಿ) ಅವರ ತಿಳಿಗೇಡಿತನದಿಂದ ಅವರು ದುಡಿಯುವ ದಣಿಗಳ ಮನೆಯಲ್ಲೊ ಇಲ್ಲವೇ ಹಣಕ್ಕಾಗಿ ಇನ್ನೊಬ್ಬರ ಮನೆಯಲ್ಲೋ ವಾಸ್ತವ್ಯ ಹೂಡಿರಬಹುದು.

ಇದು ಒಂದು ಮಂಡಲದ ಪೂರ್ಣ ಚಿತ್ರಣವೇನಲ್ಲ. ಕೇವಲ 2 ಗ್ರಾಮದ ಸಮೀಕ್ಷೆ ಮಾತ್ರ.

ಪರಿಸರದ ಸ್ಥಿತಿಯ ಬಗ್ಗೆ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಕ್ಕಾಗಿ ಕೆಲವು ಭೂ

(3ನೇ ಪುಟಕ್ಕೆ)

ಪದ್ಯದಂಕಣ

ಚಂದಮಾಮ

ನೀಲಿ ಬಾನಿನ ಮಧ್ಯದಲಿ
ನಕ್ಷತ್ರಗಳ ಜೊತೆಯಲ್ಲಿ
ಆಡುತ ತೇಲುತ ಹಾಡಲ್ಲಿ
ಪುಟ್ಟ ಪುಟ್ಟ ಮಕ್ಕಳ ಕಣ್ಣಲ್ಲಿ
ಹೂವಿನಂಥ ಚಂದಮಾಮ
ಮಕ್ಕಳೊಂದಿಗೆ ಆಡುತ ಚಂದಮಾಮ
ಬೆಳಕನು ಆಕರ್ಷಿಸಿ ಬೆಳಗುವ ಚಂದಮಾಮ
ನೋವು ನಲಿವಲಿ ಕೂಡಿ ಹಾಡುವ ಮಾಮ
ಬೆಳದಿಂಗಳ ಸವಿಯನ್ನು ಲೋಕಕ್ಕೆ ಕೊಡುತ್ತ
ಪ್ರೀತಿ ವಿನಯವ ಹಂಚುತ್ತ
ತಂಗಾಳಿ ಬೀಸುವಾಗ ಮಕ್ಕಳೆಲ್ಲ
ನಲಿಯುತ್ತ
ನೋಡಿದಾಗ ಚಂದಮಾಮ ಗುಡ್ಡದ
ಮರೆಯುತ್ತ

● ರೇಖಾ,
(8ನೇ ತರಗತಿ), ಕೊಪ್ಪ

ಈಗಲ್ಲ

ಮುದ್ದಿಸಲು
ಪ್ರಿಯಕರನಿಗೆ
ಈಗಲ್ಲ
ಆಗಲ್ಲ
ಎಂದು ಆಟವಾಡಿಸಿದ
ಹುಡುಗಿ
ಆಗೊಲ್ಲ ಎಂದು ಮಾತ್ರ
ಹೇಳಲಿಲ್ಲ

● ಬಿ.ಪಿ. ಆಶಾಕುಮಾರಿ,
(8ನೇ ತರಗತಿ), ಬಿಳ್ಮಡಿ

ಬೇಸಿಗೆ ಭತ್ತದ ಬೆಳೆಗೆ ಹಾನಿ : ಕೃಷಿ ಅಧಿಕಾರಿಗಳ ಸ್ಥಳ ಪರಿಶೀಲನೆ

ಕೊಪ್ಪ : 'ಮುಂಜಾವು' ಸಲಹೆಯಂತೆ ಜೂನ್ 22 ರಂದು ಇಲ್ಲಿನ ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸಯ್ಯ ಮತ್ತು ಕೃಷಿ ಅಧಿಕಾರಿ ರಾಜಶೇಖರ್ ಇವರುಗಳು ಮಳೆಗೆ ಸಿಕ್ಕಿರುವ ಬೇಸಿಗೆ ಭತ್ತದ ಬೆಳೆಯ ಕೆಲವು ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಡಿಫೀರ್ ಕೊಟ್ಟಿಗೆ; ಮಳೆಯಲ್ಲೇ ಭತ್ತ ಬೇರ್ಪಡಿಸಲು ಹೆಣಗಾಟ

ಇಲ್ಲಿಗೆ ಸಮೀಪದ ಟಿ. ವಿ. ಎನ್. ಹೇರಳೆಯವರ ಮನೆಯ ಅಂಗಳದಲ್ಲೂ, ಕಣದಲ್ಲೂ ಒಂದೊಂದು ಡಿಫೀರ್ ಕೊಟ್ಟಿಗೆ ನಿರ್ಮಿಸಿಕೊಂಡು, ಕತ್ತರಿಯಲ್ಲೇ ಮುಗ್ಗಿ, ತೆನೆಯಲ್ಲೇ ಸುಳಿ ಬಂದಿರುವ ಭತ್ತವನ್ನು ಬಡಿದು ಬೇರ್ಪಡಿಸುವ ಯತ್ನ ಸಾಗಿತ್ತು. ಅಂತೆಯೇ ಬೇರ್ಪಡಿಸಿದ ಭತ್ತವನ್ನು ಇದ್ದ ಬದ್ದ ಕೊಟ್ಟಿಗೆ – ಕಿರು ಜಗುಲಿಗಳ ಮೇಲೆಲ್ಲ ಹರಡಿ ಒಣಗಿಸುವ ಪ್ರಯತ್ನ ಮಳೆಯಲ್ಲೂ ಸಾಗಿತ್ತು.

ಹೇರಳೆಯವರು ಪ್ರತಿ ಬೇಸಾಯದ ಬಗೆಗೂ ಇಟ್ಟಿರುವ ಅತಿ ವಿವರವಾದ ಲೆಕ್ಕಾಚಾರ, ಅಂಕಿ–ಅಂಶಗಳ ಮೂಲಕ, ಕಳೆದ ವರ್ಷಕ್ಕೂ ಈ ವರ್ಷಕ್ಕೂ ಬೇಸಿಗೆ ಬೆಳೆಯಲ್ಲಿ ತಮಗಾದ ಲಾಭ ನಷ್ಟದ ವಿವರಗಳನ್ನು ನೀಡಿ, ಎಕರೆಗೆ ನಿವ್ವಳ 1250 ರೂ. ನಷ್ಟವಾಗಿದೆ ಎಂದರು.

ಭತ್ತ ಬೇರ್ಪಡಿಸಿದರೂ ಒಣಗಿಸುವುದೆಲ್ಲಿ?

ಈಗ ಕೊಳೆತ ಹುಲ್ಲಿನಿಂದ ಬೇರ್ಪಡಿಸಿ ... ಭತ್ತವನ್ನಾದರೂ ಒಣಗಿಸಲು ಸಾಧ್ಯವಾದರೆ ಸ್ವಲ್ಪ ಉಳಿಯಬಹುದು. ಆದರೆ ಒಣಗಿಸುವುದೆಲ್ಲಿ? ಎಂದು ಪ್ರಶ್ನಿಸಿದ ಅವರು, ಹಲವಾರು ಕಡೆಗಳಲ್ಲಿ ವಾಸದ ಜಗಲಿಯ ಮೇಲೆ ಭತ್ತ ಹರಡಿ, ಮನೆ–ಮಂದಿಯೆಲ್ಲ ಅದರ ಮೇಲೇ ಮಲಗುವ ಏರ್ಪಾಡು ಮಾಡಿಕೊಂಡಿದ್ದಾರೆಂದರು.

ಜೂನ್ 5 ರಿಂದ 9ರವರೆಗೆ ಮಳೆ ಸಾಕಷ್ಟು ಹೊಳವು ಕೊಟ್ಟಿತ್ತಲ್ಲ? ಎಂಬುದಕ್ಕೆ, ಆಗಲೇ ಎಲ್ಲ ರೈತರೂ ಕೊಯ್ಲು, ಜಪ್ಪುವುದು ಮಾಡಬೇಕಾಗಿ ಬಂದುದರಿಂದ, ಕೆಲಸಗಾರರ ತೀವ್ರ ಅಭಾವ ತಲೆದೋರಿ, ಹೆಚ್ಚಿನವರಿಗೆ ಬಹಳ ಅನುಕೂಲವೇನೂ ಆಗಲಿಲ್ಲವೆಂದರು.

ವಿಸ್ತೃತ ಸಮೀಕ್ಷೆ

ಈ ಬಗ್ಗೆ ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆಗಳು ವಿಸ್ತೃತ ಪರಿಶೀಲನೆ ನಡೆಸುತ್ತಿದ್ದು, ನಷ್ಟದ ನಿಖರವಾದ ಅಂದಾಜು ಮಾಡಲಾಗುವುದೆಂದ ಶ್ರೀನಿವಾಸಯ್ಯ, ಹೇರಳೆಯವರು ಸೂಚಿಸಿದಂತೆ ಕೊಪ್ಪ ತಾ॥ ವ್ಯವಸಾಯೋತ್ಪನ್ನ ಮಾರಾಟ ಸಹಕಾರಸಂಘದಲ್ಲಿ ಭತ್ತದ ಡ್ರೈಯರ್ ಸ್ಥಾಪಿಸಬೇಕೆಂದು ಈಗಾಗಲೇ ನಿರ್ಣಯವಾಗಿರುವುದನ್ನು ಶೀಘ್ರವಾಗಿ ಕಾರ್ಯಗತ ಮಾಡುವಂತೆ ಸಂಘದೊಡನೆ ವ್ಯವಹರಿಸುವುದಾಗಿ ತಿಳಿಸಿದರು.

ಈಗ ಅರೆಬರೆ ಒಣಗಿರುವ ಭತ್ತದಿಂದ ಕುಚ್ಚಿಗೆ ಅಕ್ಕಿ ಮತ್ತು ಅವಲಕ್ಕಿ ಮಾಡಿಕೊಳ್ಳಬೇಕೆಂದು ಅಭಿಪ್ರಾಯಿಸಿದ ಅವರು, ಬೇಸಿಗೆ ಬೆಳೆಗೆ ಆದಷ್ಟೂ 100–120 ದಿನದೊಳಗೆ ಕೊಯ್ಲಿಗೆ ಬರುವ ತಳಿಗಳನ್ನೇ ಆಯ್ದುಕೊಂಡು ಸಕಾಲದಲ್ಲಿ ಬಿತ್ತನೆ ಮಾಡಬೇಕೆಂದೂ, ಬೇಸಿಗೆ ಭತ್ತ ಬೆಳೆಯ ವಿಸ್ತೀರ್ಣವನ್ನು ಕಮ್ಮಿ ಮಾಡಿಕೊಳ್ಳಬೇಕೆಂದೂ ರೈತರಿಗೆ ಸಲಹೆ ಮಾಡಿದರು. (ಅವರ ಒಂದು ಪ್ರತ್ಯೇಕ ಹೇಳಿಕೆಯನ್ನೂ ಪ್ರಕಟಿಸಿದೆ)

ಕೃಷಿ ಕಾರ್ಮಿಕರ ದುಃಸ್ಥಿತಿ

'ಮುಂಜಾವು' ನಡೆಸಿದ ಸಮೀಕ್ಷೆಯಂತೆ, ಹಲವಾರು ಕಡೆಗಳಲ್ಲಿ ಜಮೀನಿನ ಮಾಲೀಕರು ಮಾತ್ರವಲ್ಲದೆ, ಕೃಷಿ ಕಾರ್ಮಿಕರೂ ಸಹ ಬೇರೆಯವರ ಜಮೀನಿನಲ್ಲಿ ವಾಡಿಕೆಯಂತೆ ಭತ್ತ ಬೆಳೆದಿದ್ದು, ಅವರ ಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ. ಮಾಡಿದ ಕೆಲಸ, ಹಾಕಿದ (ಸಾಲ–ಸೋಲದ) ಬಂಡವಾಳ ಎಲ್ಲವೂ ವ್ಯರ್ಥವಾಗಿರುವುದು ಮಾತ್ರವಲ್ಲದೆ, ಎತ್ತು–ನೇಗಿಲು, ಬೀಜದ ಭತ್ತ, ಗೊಬ್ಬರ ಹಾಗೂ 'ಗಡಿ' — ಇವೆಲ್ಲದರ ಪಾಲೂ ಮಾಲೀಕರಿಗೆ ಕೊಡಬೇಕಾಗಿರುವ ಭತ್ತವನ್ನೂ ಕೊಡಲು ದಾರಿಯಿಲ್ಲದೆ, ವಿನಾಕಾರಣ ಸಾಲದಲ್ಲಿ ಮುಳುಗುವಂತಾಗಿದೆ.

ಒಂದು ವೇಳೆ ಪರಿಹಾರಕ್ಕೂ ಅರ್ಜಿ ಹಾಕಲು ಆಧಾರವಿಲ್ಲವಾಗಿದೆ. ಅಕಸ್ಮಾತ್ ಪರಿಹಾರಕ್ಕೆ ಅರ್ಜಿ ಸಲ್ಲಿಸುವುದಾದರೂ ಮಾಲೀಕರೇ ತಮ್ಮ ಹೆಸರಲ್ಲಿ ಸಲ್ಲಿಸಬೇಕು. ಅವರು ಸಣ್ಣ ರೈತರಲ್ಲದಿದ್ದಲ್ಲಿ ಪರಿಹಾರ ಬರುವ ಸಂ[ಭ]ಭವವಿಲ್ಲ. ಅಕಸ್ಮಾತ್ ಪರಿಹಾರ–ಗಿರಿಹಾ[ರ] ಏನಾದರೂ ಮಂಜೂರಾದರೂ ಹೀಗೆ 'ಗಡಿ'ಗೆ ಭತ್ತ ಬೆಳೆದ ಎಷ್ಟು ಮಂದಿ ಕೃಷಿ ಕಾರ್ಮಿಕರಿಗೆ ಅದು ದಕ್ಕೀತು? ಇನ್ನು, ಈ ನೆಪದಲ್ಲಿ ಮಾಲೀಕ ರೈತರಿಗೆ ಸಾಲದ ನ[...] ವೋ ರಿಯಾಯ್ತಿಯೋ ಏನಾದರೂ ಸಿಕ್ಕಿ[...] ದರಂತೂ ಅದರಲ್ಲಿ ಪಾಲು ಕೇಳುವುದು ವ್ಯರ್ಥ. ಸುಮಾರು ಶೇ. 20 ರಿಂದ 2[5] ರಷ್ಟು ಬೇಸಿಗೆ ಬೆಳೆ ಈ ರೀತಿಯದೆಂದು ಸ್ಥೂಲವಾಗಿ ಅಂದಾಜು ಮಾಡಬಹುದು.

ಎಲ್ಲ ಗೊಬ್ಬರದ ಗುಂಡಿಗೆ

ಎಲ್ಲ ಕಡೆ ಪೂರ್ತಿ ಹುಲ್ಲನ್ನೂ ಗೊಬ್ಬರದ ಗುಂಡಿಗೆ ಹಾಕಲಾಗಿದೆ. ಆದರೆ ಎಷ್ಟೊ ಕಡೆ, ಅದರ ಜೊತೆಗೆ ಭತ್ತವನ್ನೂ ಸ[...] (ಬೇರ್ಪಡಿಸದೆ) ಗುಂಡಿಗೆ ಎಸೆಯಲಾಗಿರು[...] ಹೃದಯ ವಿದ್ರಾವಕ ದೃಶ್ಯ ಕಂಡು ಬಂತು. ಬೇರ್ಪಡಿಸಿದ ಭತ್ತವನ್ನು ಒಣಗಿಸಲಂತೂ ಹೊಗೆದಟ್ಟಿ, ಡಬ್ಬಿ ತಗಡು ಮುಂತಾ[ದ] ವ್ಯವಸ್ಥೆ ಮಾಡಿಕೊಂಡು–ಒಟ್ಟಾರೆ ಬೆಳೆ[...] ದನ್ನು ಬಿಸಾಡಲಾರದ ಸಂಕಟಕ್ಕೆ–ಏ[...] ನೋ ಹೆಣಗಾಟ ಮಾಡುತ್ತಿದ್ದುದು ಕಂಡು ಬಂತು. (ಈ ದುರವಸ್ಥೆ ಈ ವರದಿ [...] ಯುವ ಹೊತ್ತಿಗೆ ಸಹ ಅಲ್ಲಲ್ಲಿ ನಡೆಯು[...] ತ್ತಿರುವುದಾಗಿ ತಿಳಿದು ಬರುತ್ತದೆ.)

—ಸಿರಿಮನೆ ನಾಗರಾಜ್

ಪರಿಸರದ ಬಗ್ಗೆ ಕಾಳಜಿ ವಹಿಸುವುದು ತಪ್ಪಲ್ಲ

ಪ್ರಿಯರೆ,

ಇತ್ತೀಚಿಗೆ 'ಮುಂಜಾವು' ಪರಿಸರದ ಬಗ್ಗೆ ಅತಿ ಕಾಳಜಿಯುಳ್ಳ ಪತ್ರಿಕೆಯಾಗುತ್ತಿರುವುದು ಅತಿ ಮುಖ್ಯ. ಏಕೆಂದರೆ ಪರಿಸರ ಉಳಿಸಬೇಕು. ನಮಗಲ್ಲದಿದ್ದರೂ, ನಮ್ಮವರಿಗೆ, ಮುಂದಿನ ಜನಾಂಗದವರಿಗೆ. ಅಷ್ಟೇ ಏಕೆ ನಾವೇ ಇನ್ನೊಂದು 50-60 ವರ್ಷ ಬದುಕಿದರೆ, ನಮ್ಮ ಪರಿಸರ ಮಾಲಿನ್ಯದ ಬಗ್ಗೆ, ನಾವೇ ಚಿಂತಿಸಬೇಕಾಗುವ ಸಾಧ್ಯತೆಗಳಿಗೆ. ಉಸಿರಾಡುವ ಗಾಳಿ, ಕುಡಿಯುವ ನೀರು, ತಿನ್ನುವ ಆಹಾರ ಎಲ್ಲವೂ ಮಾಲಿನ್ಯಕ್ಕೀಡಾಗಿರುತ್ತವೆ. ಮುಂದಿನ ಶತಮಾನದವರು ಮುಸುಕು ಹಾಕಿಕೊಂಡು, ಉಸಿರಾಡಲು ಆಮ್ಲಜನಕ ಸಿಲಿಂಡರ್‌ಗಳನ್ನು ಬೆನ್ನ ಹಿಂದೆ ಹಾಕಿಕೊಂಡಿರುವ ವ್ಯಂಗ್ಯ ಚಿತ್ರಗಳನ್ನು ಈಗಲೇ ಕಾಣಬಹುದು. ಆದ್ದರಿಂದ, ಪರಿಸರವನ್ನು ಉಳಿಸಲೇಬೇಕು.

ಕಾಡಿಲ್ಲದಿದ್ದರೆ, ಮಳೆ ಎಲ್ಲಿ? ಬೆಳೆ ಎಲ್ಲಿ? ಕಾಡು ನಾಶ ಮಾಡಿದರೆ ಅದರಲ್ಲಿ ವಾಸಿಸುವ ಕ್ರೂರ ಮೃಗಗಳೂ ಸಹ ನೆಲೆ ಹುಡುಕಿ ನಗರ ಪ್ರದೇಶಗಳಿಗೆ ಬಂದು ಹಾವಳಿ ಮಾಡುತ್ತವೆ ಇಂತಹ ಪ್ರಸಂಗಗಳು ಈಗಾಗಲೇ ನಡೆದಿವೆ. ಕಾಡನ್ನು ಉಳಿಸಿ ಬೆಳೆಸುವುದರಿಂದ, ಉರುವಲು

ಓದುಗರ ಪತ್ರಗಳು

ಸಮಸ್ಯೆ ಸ್ವಲ್ಪವಾದರೂ ಕಡಿಮೆಯಾಗುತ್ತದೆ. (ಇದರ ಪ್ರಯೋಜನ ಬಡ ವರ್ಗಗಳಿಗೂ ದೊರಕುವುದಷ್ಟೆ?) ಕಾಡಿನಿಂದಾಗುವ ಉಪಯೋಗ, ನಾಶ ಮಾಡಿದರೆ ಆಗುವ ಅನಾಹುತದ ಬಗ್ಗೆ ಹೇಳುತ್ತಾ ಹೋದರೆ ಪುಟಗಟ್ಟಲೆ ಬರೆಯಬಹುದು.

ಕೊನೆಯದಾಗಿ : ಪ್ರಕೃತಿ ನಾಶವಾಗುವುದಿಲ್ಲ (ಶಾಶ್ವತ) ಎನ್ನಲಾಗುವುದಿಲ್ಲ. ಏಕೆಂದರೆ, ಈ ಪ್ರಪಂಚದಲ್ಲಿರುವ ಯಾವ ವಸ್ತುಗಳೂ ಕೂಡಾ ಶಾಶ್ವತವಾದುವಲ್ಲ. ನಾವೇ ಕೇಳಿದಂತೆ ಸಹಸ್ರಾರು ವರ್ಷಗಳ ಹಿಂದಿನ ಪರಿಸರ ಈಗಿಲ್ಲ. ಮುಂದೆ ಇಷ್ಟೂ ಇರುವುದಿಲ್ಲ ಆದ್ದರಿಂದ, ಇನ್ನೊಮ್ಮೆ ನೆನಪಿಸುತ್ತಿದ್ದೇನೆ: ಪರಿಸರ ಮುಂದಿನವರಿಗೆ ಮಾತ್ರವಲ್ಲ, ನಮಗೂ ಕೂಡ ಸುಖಕರ ಜೀವನಕ್ಕೆ ಅತಿ ಅವಶ್ಯಕವಾಗಿ ಉಳಿಯಲೇಬೇಕು ಮತ್ತು ಸರಿಯಾದ ರೀತಿಯಿಂದ ಬೆಳೆಯಬೇಕು.

—ಜೆ. ಅಚಿಂತ್ಯ, ತೀರ್ಥಳ್ಳಿ.

('ಮುಂಜಾವು' ಮಾತ್ರವಲ್ಲ, ಈಚಿಗೆ ಯಾವುದೇ ಪತ್ರಿಕೆ ತೆರೆದರೂ-ದಿನಪತ್ರಿಕೆ, ವಾರ ಪತ್ರಿಕೆ, ಅಷ್ಟೇಕೆ, ಧಾರ್ಮಿಕ ಪತ್ರಿಕೆಗಳಲ್ಲೂ ಸಹ—ಪರಿಸರದ ಬಗ್ಗೆ ಕಾಳಜಿ, ಪರಿಸರ ನಾಶ ಅಥವಾ ಮಾಲಿನ್ಯದ ಬಗ್ಗೆ ಆತಂಕ ವ್ಯಕ್ತ ಪಡಿಸುವ ವರದಿ, ಲೇಖನ, ಪತ್ರ, ಅನುಭವ ಇತ್ಯಾದಿಗಳು ಸರ್ವೇ ಸಾಮಾನ್ಯವಾಗಿವೆ. ಈ ಸಮಸ್ಯೆಯ ಅಗಾಧತೆ ಎಷ್ಟೆಂಬುದು ಅದರಿಂದಲೇ ವ್ಯಕ್ತವಾದೀತು.

ಪರಿಸರ ಏರುಪೇರಾಗಿ, ಮಳೆ-ಬೆಳೆ-ಅಸ್ತವ್ಯಸ್ತವಾಗುತ್ತಿರುವುದಕ್ಕೂ, ಭಿಕ್ಷುಕರ, ದಟ್ಟದರಿದ್ರ ಕೂಲಿಗಾರರ, ಜೋಪಡಿ-ಫುಟ್‌ಪಾತ್ ವಾಸಿಗಳ ಸಂಖ್ಯೆ ಹೆಚ್ಚಿರುವುದಕ್ಕೂ ಪರಸ್ಪರ ಏನೂ ಸಂಬಂಧವಿಲ್ಲವೆ? ಮಳೆ-ಬೆಳೆ ಚೆನ್ನಾಗಿ ಆಗುತ್ತಿದ್ದರೆ. ಕೂಲಿ-ನಾಲಿಯವರ ಶೋಷಿತ ಬದುಕಿನಲ್ಲೂ ಸಹ ಶುದ್ಧ ಗಾಳಿ, ಕುಡಿಯಲು ನೀರು, ಆರೋಗ್ಯ, ಹೊಟ್ಟೆ ತುಂಬ ಊಟ-ಕಡೆಗೆ ದಿನಕ್ಕೆ ಒಂದು ಹೊತ್ತಾದರೂ—ಇಷ್ಟಾದರೂ ಸಿಗುವ ಸಾಧ್ಯತೆ ಇದೆಯಲ್ಲವೆ? ಇದೇ ಶೋಷಿತ ಜನಸಮುದಾಯದ ಬದುಕು ಬರ ಪರಿಸ್ಥಿತಿ ಮತ್ತು ಸುಭಿಕ್ಷದ ಪರಿಸ್ಥಿತಿಗಳಲ್ಲಿ ಒಂದೇ ಥರ ಇರುವುದೆ?

—ಸಂಪಾದಕ

ರಚನಾತ್ಮಕ ಸಲಹೆಗಳಿಗೆ ಸದಾ ಸ್ವಾಗತ

ಸನ್ಮಾನ್ಯ ಸಿರಿಮನೆ ನಾಗರಾಜ್‌ರವರಿಗೆ,

ತಾ॥ 1-7-90ರ ನಿಮ್ಮ ಪತ್ರಿಕೆಯಲ್ಲಿ ನೀವು ಬರೆದ ಕೆಲವಾರು ಸಲಹೆಗಳನ್ನು ಓದಿದೆ. ನಾನು ವಹಿಸಿಕೊಂಡಿರುವ ಈ ಹೊಸ ಜವಾಬ್ದಾರಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಯಾಗಿ ನಿರ್ವಹಿಸಲು ಪ್ರಯತ್ನ ಪಡುತ್ತೇನೆ.

ನೀವು ನೀಡಿದ ಸಲಹೆಗಳ ಪೈಕಿ ಈಗಾಗಲೇ ನಮ್ಮ ಮೊದಲ ಸಭೆಯಲ್ಲಿ ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯದ ಒಂದು ನೀರಿನ ಟ್ಯಾಂಕ್ ನಿರ್ಮಿಸುವ ಬಗ್ಗೆ ಹಣ ಮಂಜೂರಾತಿ ನೀಡಿರುತ್ತೆ ಅಲ್ಲದೆ ನಾಗಲಾಪುರದಿಂದ ಹಿಡಿದು ಹಿರೀಕೆರೆಯಲ್ಲಿ ಹಾಕಿರುವ ಪಂಪ್‌ಸೆಟ್‌ಗಳನ್ನೂ ಸಮಗ್ರವಾಗಿ ಬದಲಾಯಿಸಿ ಸರಿಯಾದ ಸಾಮರ್ಥ್ಯದ ಪಂಪ್‌ಸೆಟ್‌ಗಳನ್ನು ಹಾಕಲಾಗುವುದು. ನೀರು ಸೋಸುವ ವ್ಯವಸ್ಥೆ ಬಗ್ಗೆ ತಜ್ಞರ ಸಲಹೆ ಮೇರೆಗೆ ಸದ್ಯದಲ್ಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ

ನನ್ನ ಈ ಹೊಸ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುತ್ತೇನೆಂದು ಭರವಸೆ ನೀಡುತ್ತೇನೆ. ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಹೆಸರು ತೆಗೆದುಕೊಳ್ಳುವುದು ಕಷ್ಟವಾದರೂ, ಆ ಬಗ್ಗೆ ಪ್ರಯತ್ನ ಪಡುತ್ತೇನೆ ಮುಂದೆಯೂ ಸಹ ಎಲ್ಲಾ ರೀತಿಯ ರಚನಾತ್ಮಕವಾದ ಸಲಹೆಗಳಿಗೆ ಸದಾ ಸ್ವಾಗತವಿದೆ.

ಪಿ.ಬಿ ವಿವೇಕ್ ನಾಯಕ್,
ಪ್ರಧಾನರು, (ಪರಿವರ್ತಿತ) ಮಂಡಲ ಪಂಚಾಯ್ತಿ, ಕೊಪ್ಪ.

ಮಹಿಳಾ ಸಂಘಟನೆ : ಕೆಲವು ಅಡೆತಡೆಗಳು

ಪ್ರಿಯರೆ,

ಎಂಥ ಆಭಾಸ! ಈ ಹೆಣ್ಣು ಜಾತಿಯ ಬಗ್ಗೆ ಆಶ್ಚರ್ಯವಾಗುತ್ತಿದೆ! ಉದಾಹರಣೆಗೆ, ಒಬ್ಬ ಮಹಿಳೆ ತನ್ನ ಗಂಡ ತನಗೆ ದೈಹಿಕ ಹಿಂಸೆ, ಮಾನಸಿಕ ಕಿರುಕುಳ ಕೊಡುತ್ತಿದ್ದಾನೆಂದೂ, ತಾನು ಸಾಯುವೆನೆಂದೂ ತಿಳಿಸಿದರು. ಅವರಿಗೆ ಲಾಯರ್ ಶಶಿಕಲಾ ಅವರ ಮುತುವರ್ಜಿಯಲ್ಲಿ ಮೂರು ತಾ॥ಗಳ ಮಟ್ಟದಲ್ಲಿ ಮಹಿಳಾ ಸಂಘಟನೆಯೊಂದರ ರಚನೆಗೆ ಯತ್ನ ನಡೆದಿರುವುದನ್ನು ತಿಳಿಸಿ, ನಿಮ್ಮ ಪತ್ರಿಕಾಲಯಕ್ಕೆ ಹೋಗಿ ಸಮಸ್ಯೆ ಬಗ್ಗೆ ಚರ್ಚಿಸಲು ಹೇಳಿದಾಗ ಹಿಂದೇಟು ಹೊಡೆದರು. ಮರುದಿವಸವೇ, ತಾನು ಚೆನ್ನಾಗಿರುವುದಾಗಿಯೂ, ಮಹಿಳೆಯರ ಸಂಘಟನೆಯ ಅವಶ್ಯಕತೆ ಇಲ್ಲವೆಂದೂ (ಸುಳ್ಳು) ಹೇಳಿದರು. ಇದಕ್ಕೇನು ಹೇಳುವುದು?

1. ಮಹಿಳೆಗೆ ಆರ್ಥಿಕ ಭದ್ರತೆ ಇಲ್ಲದಿರುವುದು;

2. ಸಮಾಜದ ಇತರ ಮಹಿಳೆಯರು—ಧೈರ್ಯ ವಹಿಸಿ-ಕಿರುಕುಳಕ್ಕೆ ಒಳಗಾದ ಮಹಿಳೆಯ ಸಹಾಯಕ್ಕೆ ಬಾರದಿರುವುದು;

3. ಪಕ್ಕದ ಮನೆಯಲ್ಲಿ ತಾನೆ ಬೆಂಕಿ ಹತ್ತಿದೆ ? ನನಗ್ಯಾಕೆ ಇಲ್ಲದ ಉಸಾಬರಿ—ಎನ್ನುವ ಮನೋಭಾವ ಹೊಂದಿರುವುದು;

4. ಸಮಾಜವು (ಹೆಚ್ಚಿನಂಶ) ಗಂಡ ತನ್ನ ಹೆಂಡತಿಯನ್ನು ಹೊಡೆಯುವುದನ್ನು

(4ನೇ ಪುಟಕ್ಕೆ)

ಪ. ಘಟ್ಟ ಪರಿಸರದ ವ್ಯಾಪಕ ಸಮೀಕ್ಷೆ

(2ನೇ ಪುಟದಿಂದ)

ಒಡೆಯರು ಮತ್ತು ಭೂರಹಿತರನ್ನು ಪ್ರಶ್ನಿಸಿದಾಗ ಇಬ್ಬರೂ ಸಹ ಪರಸ್ಪರ ದೂರಿಕೊಂಡರು. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಎಲ್ಲಾ ಪರಿಸರ ನಾಶಕ್ಕೂ ಇಲ್ಲಿ ಬದುಕುವ ಪ್ರತಿಯೊಬ್ಬನೂ ಹೊಣೆಗಾರನೇ ಎಂಬುದನ್ನು ಅರಿತು, ಇದ್ದ ಕಾಡನ್ನು ಮಿತಿಯಲ್ಲಿ ಬಳಸುವುದು, ಜೊತೆಗೆ ಸಾಧ್ಯವಾದಷ್ಟು ಗಿಡ ಮರ ಬೆಳೆಸುವುದು ಪ್ರತಿಯೊಬ್ಬರ ವೈಯಕ್ತಿಕ ಜವಾಬ್ದಾರಿ ಎಂಬುದನ್ನು ತಿಳಿದು ನಡೆದರೆ, ಸುತ್ತ ಮುತ್ತಲ ಪರಿಸರ ತಾನಾಗಿ ಅಭಿವೃದ್ಧಿ ಹೊಂದುತ್ತದೆ.

ಈ ಸಮೀಕ್ಷೆಗೆ ಬಳಸಿದ ಪ್ರಶ್ನಾವಳಿಯಲ್ಲಿ ಮುಖ್ಯ ವಿಷಯವಾದ : "ಗ್ರಾಮದ ಕಾಡಿನ ರಕ್ಷಣೆ ಮತ್ತು ಅಭಿವೃದ್ಧಿಗೆ ಗ್ರಾಮಸ್ಥರದೇ ಆದ ಒಂದು ಪ್ರತ್ಯೇಕ ಸಮಿತಿ" ಈ ಕುರಿತು ಬಹುಮಟ್ಟಿಗೆ ಎಲ್ಲರಲ್ಲೂ ಆಶಾಭಾವನೆ ಮೂಡಿ ಬಂದಿತು.

ಮುಂಬರುವ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಪಶ್ಚಿಮ ಘಟ್ಟದ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುನ್ನ, ಈವರೆಗಿನ ಯೋಜನೆಗಳ ಸಫಲತೆಯನ್ನು ತಿಳಿಯಲೋಸುಗ ಈ ಸಮೀಕ್ಷೆ ನಡೆಸಲಾಯಿತು. ಸಾಕಷ್ಟು ಕ್ರಮಬದ್ಧವಾಗಿ ನಡೆದ ಈ ಸಮೀಕ್ಷೆಯ ವರದಿಗಳು ಅನುಷ್ಠಾನಕ್ಕೆ ಬಂದಲ್ಲಿ ಪರಿಸರಕ್ಕೆ ಸ್ವಲ್ಪ ಪ್ರಯೋಜನವಾಗಬಹುದು.

ನಮ್ಮ ಈ ಅಧ್ಯಯನವನ್ನು ತುಂಬು ಹೃದಯದಿಂದ ಸ್ವಾಗತಿಸಿ, ಸಲಹೆ, ಸಹಕಾರ ನೀಡಿದ ಎಲ್ಲಾ ಗ್ರಾಮಸ್ಥರಿಗೂ, ಅಧಿಕಾರಿಗಳಿಗೂ ಮತ್ತು ಮಂಡಲ ಪ್ರಧಾನರು, ಸದಸ್ಯರಿಗೂ ತಂಡದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

—ವೈ. ಗ. ಜಗದೀಶ್,
ವೈಕುಂಠಪುರ-ಶೃಂಗೇರಿ.

ಪರಿಸರದ ಉಳಿವಿನ ಲಾಭ ಯಾವುದೇ ಒಂದು ವರ್ಗಕ್ಕೆ ಸೀಮಿತವಲ್ಲ

ಪ್ರಿಯರೆ,

ಕೃಷ್ಣ ಭಂಡಾರಿಯವರ ಪತ್ರಕ್ಕೆ ನನ್ನದೊಂದು ಪ್ರತಿಕ್ರಿಯೆ. ಪರಿಸರವೆಂಬುದು ನೈಸರ್ಗಿಕವಾಗಿ ನಿರ್ಮಾಣವಾದ ಮಾನವ, ಪಶು-ಪಕ್ಷಿ ಸಂಕುಲಗಳ ಉಳಿವಿಗಾಗಿ ಇರುವ ಒಂದು ವ್ಯವಸ್ಥೆ. ಅದು ಯಾರೊಬ್ಬರ ಸ್ವತ್ತೂ ಅಲ್ಲ.

ಪರಿಸರ ಕೇವಲ ಒಂದು ವರ್ಗದ ಜನರಿಗಾಗಿ ಎಂಬುದು ಸರಿಯೆನಿಸದು. ನಾವು ಉಸಿರಾಡುವ ಗಾಳಿ, ಬಳಸುವ ನೀರು ಕೇವಲ ಒಂದು ವರ್ಗಕ್ಕೆ ಸೀಮಿತವೆ ? ಕೆಲವು ಆಧುನಿಕ 'ಕಿರಾತಕ'ರಿಂದ ಆಗಬಹುದಾದ ಅನಾಹುತವನ್ನು ತಪ್ಪಿಸಲು ಯಾರೂ ಪ್ರಯತ್ನಿಸದೇ ಇರುವುದು ಸರಿಯೆ ? ಪರಿಸರ ನಾಶಗೊಂಡರೆ ಅದಕ್ಕೆ ಕಾರಣವಾದ ಕಿರಾತಕರೊಂದಿಗೆ ಅಮಾಯಕ, ಮುಗ್ಧ ಜನತೆಯು ಬಲಿಯಾಗುವುದನ್ನು ಗಮನಿಸಬೇಕು.

ಯಾವ ವಿಷಯಕ್ಕೂ ಮಿತಿ ಎಂಬುದು ಅತಿ ಮುಖ್ಯವಾದುದು ಮನುಷ್ಯ ತನ್ನ ಅಗತ್ಯಕ್ಕಿಂತ ಹೆಚ್ಚಾಗಿ ದುರಾಸೆ ಪೂರಿತ ಸ್ವಾರ್ಥಕ್ಕಾಗಿ ಪರಿಸರ ನಾಶಕ್ಕೆ ಕಾರಣನಾಗುವುದು ಅಕ್ಷಮ್ಯವಾದುದು. ಇದು ಇತರರ ಬದುಕುವ ಹಕ್ಕನ್ನು ಕಸಿದುಕೊಂಡಂತೆ. ಯಾವುದೇ ಒಳ್ಳೆಯ ಕೆಲಸಕ್ಕೆ ಕೆಲವೇ ಮಂದಿ ಇರುವರು ಎಂಬುದನ್ನು ಇತಿಹಾಸವೇ ತಿಳಿಸುತ್ತದೆ.

ಸಾಮಾಜಿಕ ಪರಿಸರದ ಮತ್ತು ಪ್ರಾಕೃತಿಕ ಪರಿಸರದ ರಕ್ಷಣೆ—ಎರಡೂ ಪ್ರಾಮುಖ್ಯವಾದುವೇ. ಅವಕ್ಕೆ ಸಮಾಜದ ಪ್ರಜ್ಞಾವಂತರ ಗಮನ ಮತ್ತು ಪ್ರಾಮಾಣಿಕ ಪ್ರಯತ್ನ ಅತ್ಯಗತ್ಯವಾದುದು.

—ನಂದ, ಕೊಪ್ಪ.

ಮೇನಕಾರ ಪರಿಸರ ಕಾಳಜಿ ಪ್ರಶಂಸಾರ್ಹ

ಪ್ರಿಯರೆ,

17-6-1990ರ ಪತ್ರಿಕೆಯಲ್ಲಿ ಪ್ರಕಟವಾದ ಪರಿಸರ ಖಾತೆ-ಮೇನಕಾಗಾಂಧಿ-ಯೋಜನೆಗಳ ಕುರಿತ ಲೇಖನ ಸಮಯೋಚಿತವಾಗಿತ್ತು. ಕೈಗಾ ಮಾಡಿಯೇ ತೀರುವೆನೆಂದು ಹೇಳಿ ಕೈಗಾ ಭೂತವನ್ನು ಕನ್ನಡಿಗರ ತಲೆಗೆ ಕಟ್ಟಿ, ಚುನಾವಣೆ ಸಮಯದಲ್ಲಿ ಕೈಗಾ ವಿರೋಧಿಸುವ ಮಾತನಾಡಿದ ಕುತಂತ್ರಿ ಹೆಗಡೆಯಂತವರೇ ರಾಜಕೀಯದಲ್ಲಿ ತುಂಬಿರುವಾಗ ಮೇನಕಾ ಗಾಂಧಿಯವರ ಪರಿಸರ ಕಾಳಜಿ ಮೆಚ್ಚುವಂಥದ್ದು.

ಈ ಕುರಿತ ಸಮಗ್ರ ವರದಿ ಕೊಟ್ಟಿರುವುದಕ್ಕೆ ಅಭಿನಂದನೆಗಳು

—'ಶೃಂಗ' ಶೃಂಗೇರಿ.

ಹರಿಹರಪುರದಲ್ಲಿ ಶೇಣಿಯವರಿಗೆ ಸನ್ಮಾನ

ಹರಿಹರಪುರ : 'ಯಕ್ಷಗಾನ ವಾಚಸ್ಪತಿ' ಎಂಬ ಬಿರುದು ಗಳಿಸಿರುವ ಪ್ರಖ್ಯಾತ ಯಕ್ಷಗಾನ ಕಲಾವಿದರಾದ ಶೇಣಿ ಗೋಪಾಲಕೃಷ್ಣ ಭಟ್ಟರನ್ನು ಇಲ್ಲಿನ ಶೇಣಿ ಅಭಿಮಾನಿ ಬಳಗದವರು ಜೂನ್ 8 ರಂದು ಸನ್ಮಾನಿಸಿದರು. ಹರಿಹರಪುರ ಮಠಾಧೀಶರು ಶೇಣಿಯವರಿಗೆ ಶಾಲು ಹೊದಿಸಿ ಗೌರವಿಸಿದರು.

ಬಿ. ಸುಬ್ರಹ್ಮಣ್ಯಂ ಅಭಿನಂದನಾ ಭಾಷಣ ಮಾಡಿ ಶೇಣಿಯವರಿಗೆ ಅಭಿನಂದನಾ ಪತ್ರ ನೀಡಿದರು. ಸಮಾರಂಭದಲ್ಲಿ ಪ್ರಭಾಕರ ಜೋಷಿ, ಹರಿನಾರಾಯಣ ಬೈಪಡಿತ್ತಾಯ, ತೆಕ್ಕಟ್ಟೆ ಆನಂದ ಮಾಸ್ತರು, ಬಲಿಪ ನಾರಾಯಣ ಭಾಗವತರು ಮುಂತಾದ ಯಕ್ಷಗಾನ ಕಲಾವಿದರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಡೆಪ್ಯುಟೇಷನ್ ಮೇರೆಗೆ. ವಾರಕ್ಕೆರಡು ಬಾರಿ ಭೇಟಿ ನೀಡುತ್ತಿದ್ದ ಉತ್ತಮೇಶ್ವರದ ಸರ್ಕಾರಿ ವೈದ್ಯರಾದ ಡಾ|| ಕೋದಂಡರಾವ್‌ರಿಗೂ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು (ಅವರನ್ನು ಹರಿಹರಪುರದ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗಿದೆ.)

ಎಸ್. ವಿ. ಆಚಾರಿ ಸ್ವಾಗತಿಸಿ, ರಾಮ ಪ್ರಸಾದ್ ವಂದಿಸಿದರು. (ವರದಿ: ಅನಿಲ)

ತಿದ್ದುಪಡಿ

24-6-90ರ ಸಂಚಿಕೆಯಲ್ಲಿ "ನೆನೆದ ಛತ್ರಿಕ್ಕೆ........ಉಪಾಯ" ಎಂಬುದರಲ್ಲಿ ಉಪ್ಪು ಹಾಕಿ ಇಟ್ಟರೆ 2-3 ದಿನ ಬೂಷ್ಟು-ನೋಳಕೆ ಬರುವುದನ್ನು ತಡೆಗಟ್ಟಬಹುದು ಎಂಬುದನ್ನು "2-3 ತಿಂಗಳವರೆಗೆ" ಎಂದು ಓದಿಕೊಳ್ಳಬೇಕಾಗಿ ಕೊಪ್ಪದ ಸಹಾಯಕ ಕೃಷಿ ನಿರ್ದೇಶಕರು ಕೋರಿದ್ದಾರೆ.

ಮಹಿಳಾ ಸಂಘಟನೆಗೆ ಕೆಲವು ಅಡೆ ತಡೆಗಳು

(3ನೇ ಪುಟದಿಂದ)

ಅವನ ವೈಯಕ್ತಿಕ ಮತ್ತು ಅತ್ಯಮೂಲ್ಯವಾದ ಹಕ್ಕು ಎಂದು ತಿಳಿದಿರುವುದು;

5 ಅಂಥಾ ಭಂಡ ಗಂಡಸರಿಗೆ, ಈಗಾಗಲೇ ಅವರ ಹೆಂಡಂದಿರು ಬಾವಿಗೆ ಹಾರಿದ್ದರೂ, ಮತ್ತೆ ತಮ್ಮ ಮಗಳನ್ನು ಕೊಟ್ಟು 'ಕೈ ತೊಳೆದು'ಕೊಂಡು ತಮ್ಮ 'ಧರ್ಮ', 'ಕರ್ತವ್ಯ' ಇದರಿಂದ ವಿಮುಕ್ತ(!)ರಾಗ ಬಯಸುವ 'ಕ.ಪಿ 'ಗಳು ಇರುವುದು.

—ಇವೆಲ್ಲ ಮಹಿಳಾ ಸಂಘಟನೆಯ ಕಾರ್ಯದಲ್ಲಿ ಅಡೆತಡೆಗಳು ಎಂದು ನನ್ನ ಭಾವನೆ. ನನ್ನ ನಮ್ರ ಸಲಹೆ ಏನೆಂದರೆ,

1. ತಾಲ್ಲೂಕಿನ ಮಹಿಳಾ ಮಂಡಲಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚಿಸುವುದು; ನಾಯಕತ್ವದ ಗುಣಗಳುಳ್ಳ ಮಹಿಳೆಯರನ್ನು 'ಹೆಕ್ಕುವುದು';

2. ಪ್ರಚಾರ : ಕರಪತ್ರಗಳು-ಪೋಸ್ಟರ್‌ಗಳು-ವಾಕ್ ದೃಶ್ಯ ಮಾಧ್ಯಮ ಉಪಯೋಗ—ಇತ್ಯಾದಿ.

—ಸಂ ರಾ. ಕೋದಂಡರಾವ್,
ಉತ್ತಮೇಶ್ವರ.

ಉತ್ತಮವಾಗಿ ಬೆಳೆಸಿದ

ಏಲಕ್ಕಿ ಮತ್ತು ಅಡಿಕೆ

ಸಸಿಗಳು ಮಾರಾಟಕ್ಕಿವೆ

ಆಸಕ್ತರು ವಿಚಾರಿಸಿ :

ಎಚ್. ಎ. ಕೃಷ್ಣಮೂರ್ತಿ
ಕೆಸಗುಡಿಗೆ, ತಲಮಕ್ಕಿ ಗ್ರಾಮ
ಕುದುರೆಗುಂಡಿ ಅಂಚೆ,
ಕೊಪ್ಪ, ತಾ||

ಅಡಿಕೆ ಧಾರಣೆ

ಶಿವಮೊಗ್ಗ : 6-7-1990
ಸರಕು : 4225-4516
ಬೆಟ್ಟೆ : 3309-3789
ಗೊರಬಲು : 2409-2670
ಸಾಗರ 6-7-1990
ಇಡಿ : 3599-3691
ಆಪಿ : 4378
ಚಾಲಿ : 2996-3169
ಸಿಪ್ಪೆ ಗೋಟು : 1436-1712

ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘ ನಿ., ಕೊಪ್ಪ

ಚಿಕ್ಕಮಗಳೂರು ಜಿಲ್ಲೆ. ದೂರವಾಣಿ : 209

ಲ್ಯಾಂಪ್ಸ್/ಕೊಪ್ಪ/ಎಂ.ಎಫ್.ಸಿ./ಸಾಲು ಧೂಪ/66/90-91

ದಿನಾಂಕ 29-6-90

ಟೆಂಡರು ಕಂ ಹರಾಜು ಪ್ರಕಟಣೆ

ನಮ್ಮ ಸಹಕಾರ ಸಂಘಕ್ಕೆ 1990-92ನೇ ಸಾಲುಗಳಲ್ಲಿ ಕೊಪ್ಪ ಅರಣ್ಯ ವಲಯದಲ್ಲಿ ದೊರೆಯುವ ಸಾಲು ಧೂಪದ ಬೀಜವನ್ನು ಸಂಗ್ರಹಿಸಲು ಅರಣ್ಯ ಇಲಾಖೆಯಿಂದ ಗುತ್ತಿಗೆ ದೊರೆತಿರುತ್ತೆ. ಆದ್ದರಿಂದ ಸಂಘವು ಸಂಗ್ರಹಿಸಿದ ಸಾಲು ಧೂಪ ಬೀಜವನ್ನು ಖರೀದಿಸಲು ಆಸಕ್ತಿ ಉಳ್ಳವರು ದಿನಾಂಕ 10-7-90ರಂದು 12 ಘಂಟೆಗೆ ನಮ್ಮ ಸಂಘದ ಕಛೇರಿಯಲ್ಲಿ ನಡೆಯುವ **ಟೆಂಡರು ಕಂ ಹರಾಜಿನಲ್ಲಿ** ಭಾಗವಹಿಸಬಹುದು. ಟೆಂಡರು ಕಂ ಹರಾಜಿನಲ್ಲಿ ಭಾಗವಹಿಸುವವರು ಸಂಘವು ವಿಧಿಸಿರುವ ಷರತ್ತುಗಳನ್ನು ಒಪ್ಪಿ ಟೆಂಡರು ಸಲ್ಲಿಸಬಹುದು. ಟೆಂಡರು ಕಂ ಹರಾಜನ್ನು ಸಂಘದ ಆಡಳಿತ ಮಂಡಳಿ ಹಾಗೂ ಇಲಾಖಾಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳನ್ನು ಸಂಘದ ಕೆಲಸದ ವೇಳೆಯಲ್ಲಿ ಸಂಘದ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.

(ಸಹಿ) **ಬಿ.ಎಲ್. ನರಸಿಂಹಸ್ವಾಮಿ,**
ಕಾರ್ಯದರ್ಶಿ, ಲ್ಯಾಂಪ್ ಸೊಸೈಟಿ, ಕೊಪ್ಪ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಂಗಳೂರು-575 003

ಶಾಖೆ : ಜಯಪುರ

ತಾ|| 2-7-1990

ಹರಾಜು ನೋಟೀಸು

ಈ ಕೆಳಗಿನ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರು ಪಾವತಿ ಮಾಡದೆ ಇದ್ದುದರಿಂದ ಸದ್ರಿಯರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಂತೆ, ಕೆಲವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಸು ಬಂದಿರುವುದರಿಂದಲೂ ಸದ್ರಿಯವರಿಗೆ ಮತ್ತು ಅವರ ವಾರಿಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ. ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಖು 25-7-90ರ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ಆಭರಣಗಳನ್ನು ತಾರೀಖು 31-7-90 ಅಪರಾಹ್ನ ಗಂಟೆ 3-00ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಅಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಅಥವಾ ಖಾಸಗಿಯಾಗಿ ಹರಾಜು ಮಾಡಲಾದೀತು. ಮತ್ತು ಈ ಹರಾಜಿನಲ್ಲಿ ಬಂದ ಹಣವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ಸಾಲಗಳಿಗೆ ಜಮಾ ಮಾಡಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ಮತ್ತು ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ, ತಿಳಿದಿರಲಿ.

ಸಾಲದ ನಂಬರು	ಸಾಲಗಾರರ ಹೆಸರು ಮತ್ತು ವಿಳಾಸ	ಮೊಬಲಗು (30-6-90ರ ವರೆಗಿನ ಬಡ್ಡಿ ಸೇರಿ)
22/86	ಲಿಂಗಪ್ಪ ಬಿನ್ ಚಂದ್ರ ಪೂಜಾರಿ, ಕೂಲಿ, ದೂಬ್ಲ ಹ್ಯಾಂಡ್ ಪೋಸ್ಟ್, ದುರ್ಗದಬೆಟ್ಟ ಪೋಸ್ಟ್	ರೂ. 304-00
28/86	ಬಿ. ವಿ. ಶಂಕರನಾರಾಯಣಯ್ಯ ಬಿನ್ ಬಿ.ಕೆ. ವೆಂಕಪ್ಪಯ್ಯ, ಬಿಲಾಲ್‌ಮನೆ, ಕಲ್ಲುಗುಡ್ಡೆ ಪೋಸ್ಟ್	ರೂ. 5256-00
52/86	ಬಿ. ಸದಾಶಿವ ರಾವ್ ಬಿನ್ ಪದ್ಮನಾಭಯ್ಯ, ಗಣೇಶ ಭವನ, ಜಯಪುರ	ರೂ. 1240-00
154/86	ಆರ್.ಎಸ್. ಮಂಜುನಾಥ ಬಿನ್ ಆರ್. ಎಸ್. ಸುಬ್ರಮಣ್ಯ, ಟೆಲಿಫೋನ್ ಆಪರೇಟರ್, ಬಾಳೆಹೊನ್ನೂರು.	ರೂ. 1334-0
193/86	ಎಮ್.ವಿ. ಪಾಂಡುರಂಗ ರಾವ್ ಬಿನ್ ವೆಂಕಟಸುಬ್ಬಯ್ಯ, ಮಕ್ಕಿಕೊಪ್ಪ, ಜಯಪುರ ಪೋಸ್ಟ್	ರೂ. 5401-0
26/87	ರಂಗೇಗೌಡ ಬಿನ್ ಚಿಕ್ಕೇಗೌಡ ಕರ್ಕಿಕೊಂಡ ಎಸ್ಟೇಟ್, ದುರ್ಗದಬೆಟ್ಟ ಪೋಸ್ಟ್	ರೂ. 708-0
27/87	.... " ಡಿಟೊ "	ರೂ 940-0
55/87	ಎ ಎಮ್ ಸುಧಾಕರ ಬಿನ್ ಮಂಜಪ್ಪ ಗೌಡ, ಅರದಾಳ್, ಲೋಕನಾಥಪುರ ಪೋಸ್ಟ್	ರೂ. 2402-0
182/87	ಎ. ಸಿ. ಉಮೇಶ್, ಬಿನ್ ಎ. ಚಿನ್ನಪ್ಪ ಗೌಡ, ಅರದಾಳ್, ಲೋಕನಾಥಪುರ ಪೋಸ್ಟ್	ರೂ. 5098-0
187/87	ಕೆ ವೆಂಕಟರಮಣ, ಬಿನ್ ಕೃಷ್ಣಯ್ಯ, ಕೆರೆಮನೆ, ಹರಳಾನೆ, ಮೇಗೂರು ಪೋಸ್ಟ್	ರೂ. 3194-0
27/88	ಎಮ್. ಮಹಮ್ಮದ್ ಕುಟ್ಟಿ, ಬಿನ್ ಮಯದಿ, ಕಂಟ್ರಾಕ್ಟರ್, ಹೇರೂರು, ದುರ್ಗದ ಬೆಟ್ಟ ಪೋಸ್ಟ್.	ರೂ. 4636-0
340/88	ಕೆ. ಆರ್. ಸತೀಶ್, ಬಿನ್ ರಾಮೇಗೌಡ, ಲೋಕನಾಥಪುರ ಪೋಸ್ಟ್	ರೂ. 2746-0

ಸ್ಥಳ : ಜಯಪುರ.
ತಾ. 2-7-1990 ಸಹಿ / ಶಾಖಾಧಿಕಾರಿಗಳು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ